**ಇಂದು ದಿಃ 27-03-2026 ರಂದು ಸಾಕ್ಷಿಯನ್ನು ಪುನಃ ಮಧ್ಯಂತರ ಆದೇಶದ ಮೇರೆಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು: ಶ್ರೀ ಕೆ.ಆರ್.ಎ ವಕೀಲರಿಂದ ಪ್ರತಿವಾದಿ ಪರಃ

ಸರ್ವೆ ನಂಬರ್ 9/1, ನಿ.ಡಿ-1 ರಲ್ಲಿ ಕಾಣಿಸಿದ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಡಿ-1 ನ್ನು ಸಾಕ್ಷಿಗೆ ತೋರಿಸಿ ಸದರಿ ಕ್ರಯಪತ್ರದಲ್ಲಿ, 2 ನೇ ಪುಟದಲ್ಲಿ 'ನಮ್ಮಗಳ ಜಂಟಿ ಹಕ್ಕುದಾರಿಕೆ' ಎಂದು ಇದೆ ಎಂದರೆ ಸರಿ. ಈ ಹಿಂದೆ ನನ್ನ ಪಾಟೀ ಸವಾಲಿನಲ್ಲಿ ನನ್ನ ತಂದೆ ನನ್ನ ಅಕ್ಕನ ಮದುವೆಗೆ ಸಾಲ ಮಾಡಿದ್ದರು ಎಂದು ತಿಳಿಸಿದ್ದು, ಯಾವ ಅಕ್ಕ ಎಂದರೆ ಸಾಕ್ಷಿ 3 ನೇ ಅಕ್ಕ ಎಂದು ಹೇಳುತ್ತಾರೆ. 2011 ರಲ್ಲಿ ರೂ.2 ಲಕ್ಷ ಸಾಲ ಮಾಡಿದ್ದರು. ನನ್ನ ತಾಯಿಯ ತಮ್ಮ ಬಾಯಿ ಮಾತಿನಲ್ಲಿ ಸಾಲಕೊಟ್ಟ ಕಾರಣ, ಈ ಕುರಿತು ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಂದೆ ರೂ.2 ಲಕ್ಷ ಸಾಲ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ವ್ಯವಸಾಯ ಹೊರತುಪಡಿಸಿ, ಆತ ಬೇರೆ ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸರಿ. ವಾದಪತ್ರದಲ್ಲಿ ಸಾಲ ಮಾಡಿದ ಕಾರಣ 2 ಎಕರೆ 2 ಗುಂಟೆ ನಿ.ಡಿ-1 ರಂತೆ ಎಲ್ಲರೂ ಸೇರಿ ಮಾರಾಟ ಮಾಡಿದ್ದೇವು ಎಂದು ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನನ್ನ ಅಕ್ಕನ ಮದುವೆಗೂ ಸಾಲ ಮಾಡಿದ್ದರು ಎಂದು ವಾದಪತ್ರದಲ್ಲಿ ತಿಳಿಸಿಲ್ಲ.

ದಾವಾ ಆಸ್ತಿಗಳ ಚಕ್‌ಬಂದಿ ಕುರಿತು ನನ್ನ 3 ನೇ ಅಕ್ಕನಿಗೆ ಗೊತ್ತು. ನನ್ನ 3 ನೇ ಅಕ್ಕನಿಗೆ ಆರೋಗ್ಯ ಸರಿ ಇಲ್ಲ, ಆಕೆಗೆ ನ್ಯಾಯಾಲಯಕ್ಕೆ ಬರಲು ಆಗುವುದಿಲ್ಲ. ನನಗೆ ದಾವಾ ಆಸ್ತಿಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ದಾವಾ ಆಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ವಾದಪತ್ರದಲ್ಲಿ ತಿಳಿಸಿದ್ದು, ಯಾವ ಆಸ್ತಿ ಸ್ವಯಾರ್ಜಿತ ಎಂದು ನನ್ನ ಅಕ್ಕನಿಗೆ ಗೊತ್ತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**